# ಕರ್ನಾಟಕ ಸರ್ಕಾರ
# ಜಿಲ್ಲಾಡಳಿತ ,ಮೈಸೂರು ಜಿಲ್ಲೆ

ಬ್ರ್ಯಾಂಡ್ ಮೈಸೂರು-ಲೋಗೋ ವಿನ್ಯಾಸ ಮತ್ತು ಟ್ಯಾಗ್‌ಲೈನ್

ದಿನಾಂಕ:18.01.2018

ಒಂದು ರಾಜ್ಯ. ಹಲವು ಜಗತ್ತುಗಳು.

ಉಪನಿರ್ದೇಶಕರ ಕಛೇರಿ
ಪ್ರವಾಸೋದ್ಯಮ ಇಲಾಖೆ,ಕರ್ನಾಟಕ ಸರ್ಕಾರ
ಮೊದಲನೇ ಮಹಡಿ,ಹೊಟೇಲ್ ಮಯೂರ ಹೊಯ್ಸಳ,
#2,ಜೆ.ಎಲ್.ಬಿ ರಸ್ತೆ,ಮೈಸೂರು
ದೂರವಾಣಿ ಸಂಖ್ಯೆ:0821-2422096
ಇ-ಮೇಲ್:ddtourismmysore@gmail.com

## ಪರಿವಿಡಿ

1. ನಮೂದುಗಳನ್ನು ಸಲ್ಲಿಸಲು ಸೂಚನೆಗಳು


1.1 ಹಿನ್ನಲೆ

1.2 ವಿವರ

1.3 ನಿಯಮಗಳು ಮತ್ತು ಷರತ್ತುಗಳು

1.4 ವಿನ್ಯಾಸ ಪರಿಗಣನೆ

1.5 ಲೋಗೋ ಮತ್ತು ತಾರ್ಕಿಕತೆ

2.1 ಇತರೆ ಷರತ್ತುಗಳು

2.2 ಆಯ್ಕೆ ಪ್ರಕ್ರೀಯೆ

2.3 ಬೌದ್ಧಿಕ ಆಸ್ತಿಯ ಹಕ್ಕು

2.4 ಮೌಲ್ಯಮಾಪನ ವಿಧಾನ

2.5 ಅರ್ಜಿ ನಮೂನೆ

1. ನಮೂದುಗಳನ್ನು ಸಲ್ಲಿಸಲು ಸೂಚನೆಗಳು

1.1 ನಗರಾಭಿವೃದ್ದಿಯು ವಿಕಸನದ ನಿರಂತರ ಪರಿಕಲ್ಪನೆ.ಇಡೀ ವಿಶ್ವದಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಪ್ರವಾಸೋದ್ಯಮದ ಬೆಳವಣಿಗೆಗೆ ನಗರಾಭಿವೃದ್ದಿಯು ಪೂರಕ ಅದರ ಜೊತೆಗೆ ಮೂಲವಾಗಿ ಪ್ರಾದೇಶಿಕ ಬೆಳವಣಿಗೆಗೂ ಆದ್ಯತೆ ನೀಡಬೇಕಾಗಿದೆ. ನಗರಗಳಲ್ಲಿ ಪ್ರಮುಖವಾಗಿ ಸ್ವಚ್ಚತೆ/ನೈರ್ಮಲ್ಯ,ಭದ್ರತೆ , ಜೊತೆಗೆ ಆರ್ಥಿಕ ಆಯಾಮಗಳಿಗೆ ವಿಶೇಷ ಗಮನವನ್ನು ಕೊಡುವುದರ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಬೇಕಾಗುತ್ತದೆ.ಜಾಗತಿಕ ಮಟ್ಟದಲ್ಲಿ ನಗರಗಳು ಪ್ರವಾಸಿಗರನ್ನು ಆಕರ್ಷಿಸಲು ಆರೋಗ್ಯಕರ ಸ್ಪರ್ಧೆಗೆ ನಿಂತಿವೆ ಮತ್ತು ಜಾಗತಿಕ ಮಟ್ಟದಲ್ಲಿ ಪ್ರವಾಸಿಗರನ್ನು ಸೆಳೆಯಲು ಸ್ಪರ್ಧೆಗಳಿಗೆ ನಗರಗಳು ವೇದಿಕೆಯಾಗಿವೆ .ಅದೇ ರೀತಿಯಾಗಿ ಅಂತರರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು ಮೈಸೂರು ನಗರವನ್ನು ಬ್ರ್ಯಾಂಡಾಗಿ ಉತ್ತೇಜಿಸಬೇಕಾಗಿದೆ.

1.2 ಉದ್ದೇಶ:

- ಸ್ಪರ್ಧಾತ್ಮಕತೆಗೆ, ಹೂಡಿಕೆಗೆ, ಉದ್ಯೋಗಗಳ ಸೃಷ್ಟಿಗೆ, ವಿದೇಶಿಯರನ್ನು ಆಕರ್ಷಿಸುವಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವುದು.
- ಮೂಲಸೌಕರ್ಯಗಳ ಅಭಿವೃದ್ದಿ,ಕಾರ್ಯಕ್ರಮ ಮತ್ತು ರಿಯಲ್ ಎಸ್ಟೇಟ್‌ಗಳಂತಹ ಹೆಚ್ಚಿನ ಆದಾಯವನ್ನು ತಂದುಕೊಡುವ ಅಂಶಗಳಿಗೆ ಪ್ರೊತ್ಸಾಹಿಸುವುದು
- ನಗರವನ್ನು ಬ್ರ್ಯಾಂಡ್ ಆಗಿ ಪರಿವರ್ತಿಸಲು ಸುಸಂಬದ್ಧ ಭೌತಿಕ, ಆರ್ಥಿಕ ,ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಒಟ್ಟಾಗಿ ತಲುಪಿಸುವುದು
- ನಗರಕ್ಕೆ ಬರುವವರಿಗೆ ಹೆಮ್ಮೆ ಪಡುವಂತಹ,ವಿಶಿಷ್ಟ ಅನುಭವ ಉಂಟಾಗುವಂತಹ ವಾತಾವರಣ ನಿರ್ಮಿಸುವುದು.

  ಇಂತಹ ಅನೇಕ ಅರ್ಥಪೂರ್ಣ ಹಿನ್ನೆಲೆಗಳೊಂದಿಗೆ, ಮೈಸೂರು ನಗರವನ್ನು ಒಂದು ಬ್ರ್ಯಾಂಡ್ ಆಗಿ ಬೆಳೆಸಲು ಮೈಸೂರು ಜಿಲ್ಲಾಡಳಿತ,ಕರ್ನಾಟಕ ಸರ್ಕಾರ ಒಂದು ಸ್ಪರ್ಧೆಯನ್ನು ಏರ್ಪಡಿಸಿದೆ.

ಮೈಸೂರನ್ನು ಬ್ರ್ಯಾಂಡ್ ಆಗಿಸಲು ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

- ಮೈಸೂರು ನಗರದ ಮೌಲ್ಯಗಳು, ಗುಣಗಳು, ಆಕಾಂಕ್ಷೆಗಳು ಮತ್ತು ನಿಜವಾದ ಹೋಲಿಕೆಗಳನ್ನೊಳಗೊಂಡಿರಬೇಕು.
- ಜಾಗತಿಕ ಮಟ್ಟದ ಪ್ರವಾಸಿಗರು/ಹೂಡಿಕೆದಾರರ ಅವಶ್ಯಕ ಒಳನೋಟಗಳನ್ನು ಅಭಿವೃದ್ದಿಪಡಿಸುವುದು.
- ಆಶ್ಚರ್ಯವನ್ನುಂಟು ಮಾಡುವಂತಹ ದೊಡ್ಡ ಕಲ್ಪನೆಗಳು, ಸ್ಪೂರ್ತಿ ಸೆಲೆಗಳು ಮುಂಬರುವ ವರ್ಷಗಳಲ್ಲಿ ಹೋಲಿಕೆಯನ್ನು ಮಾಡುವಂತಿರಬೇಕು.

## 1.3 ಸಲ್ಲಿಕೆಯ ವಿವರಗಳು

1. ಸ್ಪರ್ಧೆಗೆ ಸಂಬಂಧಿಸಿದ ನಿಯಮಗಳು ಮತ್ತು ಷರತ್ತುಗಳನ್ನು www.mysore.nic.in ಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

2. ನಿಗದಿತ ನಮೂದುಗಳನ್ನು logoformysuru@gmail.com ಇ-ಮೇಲ್ ಮೂಲಕ ಸಲ್ಲಿಸುವುದು.ನಮೂದುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 15.02.2018,ನಮೂದುಗಳು/ಲೋಗೋ ವಿನ್ಯಾಸ JPEG/PNG ನಮೂನೆಗಳಲ್ಲಿ ಸಲ್ಲಿಸುವುದು(ಪಾರದರ್ಶಕವಾಗಿರುವುದು) ಮತ್ತು ಪೇಜ್ 1 ರಲ್ಲಿ PDF ನಮೂನೆಯು ಸ್ಪರ್ಧಿಯ ವಿವರ/ಸಂಸ್ಥೆಯ ವಿವರ ವಿಳಾಸಗಳನ್ನೊಳಗೊಂಡಿರಬೇಕು.(ಭಾವಚಿತ್ರ ಮತ್ತು ವಿಳಾಸದ ಪ್ರತಿ,ಹುಟ್ಟಿದ ದಿನಾಂಕ,ಮೊಬೈಲ್ ಸಂಖ್ಯೆ ,ಇ-ಮೇಲ್ ವಿಳಾಸ ಸಲ್ಲಿಸುವುದು) ಮತ್ತು ಪೇಜ್ 2 ರಲ್ಲಿ ಲೋಗೋ ಮತ್ತು ವ್ಯಾಖ್ಯಾನ: ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿಯೂ ಲೋಗೋದ ತಾರ್ಕಿಕ ವ್ಯಾಖ್ಯಾನ ನೀಡುವುದು.(50 ಕ್ಕಿಂತ ಹೆಚ್ಚು ಪದಗಳನ್ನು ಮೀರಿರಬಾರದು).

ಹೆಚ್ಚಿನ ಸ್ಪಷ್ಟೀಕರಣ ಬೇಕಾದಲ್ಲಿ ಈ ಕೆಳಗಿನ ವಿಳಾಸದಲ್ಲಿ ಪಡೆಯಬಹುದಾಗಿದೆ

ಉಪನಿರ್ದೇಶಕರ ಕಛೇರಿ
ಪ್ರವಾಸೋದ್ಯಮ ಇಲಾಖೆ,ಕರ್ನಾಟಕ ಸರ್ಕಾರ
ಮೊದಲನೇ ಮಹಡಿ,ಹೋಟೇಲ್ ಮಯೂರ ಹೊಯ್ಸಳ,
#2,ಜೆ.ಎಲ್.ಬಿ ರಸ್ತೆ,ಮೈಸೂರು
ದೂರವಾಣಿ ಸಂಖ್ಯೆ:0821–2422096
ಇ–ಮೇಲ್:ddtourismmysore@gmail.com

## 1.3 ನಿಯಮಗಳು ಮತ್ತು ಷರತ್ತುಗಳು

1. ತಮ್ಮ ನಮೂದುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 15.02.2018 ಸಮಯ 5.00 ಗಂಟೆ.ಸದರಿ ದಿನಾಂಕದಂದು 5.00 ಗಂಟೆಯ ನಂತರ ಯಾವುದೇ ಇ-ಮೇಲ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

2.ಪ್ರತಿ ಸ್ಪರ್ಧಿಯು ಕೇವಲ ಒಂದು ನಮೂದನ್ನು ಸಲ್ಲಿಸಬಹುದಾಗಿದೆ.ಒಂದು ವೇಳೆ ಒಂದಕ್ಕಿಂತ ಹೆಚ್ಚು ನಮೂದುಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಸ್ಪರ್ಧಿಯ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

3. ಭಾರತೀಯ ಪ್ರಜೆಗಳು ಮಾತ್ರ ಈ ಸ್ಫರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

4. ವಯೋಮಾನದ ಮಿತಿ ಇರುವುದಿಲ್ಲ.

5. ಒಬ್ಬ ವ್ಯಕ್ತಿ, ಗುಂಪು ,ಸಂಘಟನೆ/ಸಂಸ್ಥೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

6.ಯಾವುದೇ ಸ್ಫರ್ಧಿಯೂ ಕೂಡ ಕೇವಲ ಒಂದು ನಮೂದನ್ನು ಸಲ್ಲಿಸಬಹುದಾಗಿದೆ. ಒಬ್ಬ ವ್ಯಕ್ತಿ, ಗುಂಪು ,ಸಂಘಟನೆ/ಸಂಸ್ಥೆ ಭಾಗವಹಿಸಿ ವಿಜಯರಾಗಿದ್ದಲ್ಲಿ ಗುಂಪು ,ಸಂಘಟನೆ/ಸಂಸ್ಥೆಯನ್ನು ಪ್ರತಿನಿಧಿಸುವ ಒಬ್ಬರಿಗೆ ಬಹುಮಾನ ಕೊಡಲಾಗುವುದು.

## 1.4 ವಿನ್ಯಾಸ ಪರಿಗಣನೆ

1. ಲೊಗೋ ವಿನ್ಯಾಸವು ಮೈಸೂರನ್ನು ಒಂದು ಬ್ರ್ಯಾಂಡ್ ಮತ್ತು ಪ್ರವಾಸಿ ತಾಣವನ್ನಾಗಿ ಪ್ರತಿಬಿಂಬಿಸುವಂತಿರಬೇಕು.

2. ಲೋಗೋ ಹೆಚ್ಚಿನ ರೆಸಲ್ಯೂಶನ್ ಹೊಂದಿರಬೇಕು–300 ಫಿಕ್ಸೆಲ್ಸ್/100% ಗಾತ್ರ

3.ಲೋಗೋ ಜೆ.ಪಿ.ಜೆ/ಪಿ.ಎನ್.ಜಿ ಸ್ವರೂಪದಲ್ಲಿತಕ್ಕದ್ದು.ಪರದೆಯ ಮೇಲೆ ನೋಡಿದಾಗ ಸ್ವಚ್ಚವಾಗಿ ಕಾಣಿಸತಕ್ಕದ್ದು.

## 1.5 ಲೋಗೋ ಮತ್ತು ತಾರ್ಕಿಕ ವ್ಯಾಖ್ಯಾನ

1.ಲೋಗೋವನ್ನು ತರ್ಕಬದ್ದ ವಿನ್ಯಾಸದಲ್ಲಿ ಸಲ್ಲಿಸಬೇಕು ಹಾಗೂ ವಿನ್ಯಾಸವು ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿಯೂ ಸಲ್ಲಿಸತಕ್ಕದ್ದು.

2.ಕಲಾಕುಸರಿ: ನಮೂದುಗಳನ್ನು ಜೆ.ಪಿ.ಜೆ/ಪಿ.ಎನ್.ಜಿ ಸ್ವರೂಪದಲ್ಲಿ ಸಲ್ಲಿಸುವುದರ ಜೊತೆಗೆ ಪಾರದರ್ಶಕ ಹಿನ್ನೆಲೆಯನ್ನು ಹೊಂದಿರಬೇಕು. ಸ್ಪರ್ಧಿಯು ಕೈಬರಹದ ಸ್ಕೆಚ್,ಸ್ಕ್ಯಾನ್ ಮಾಡಿದ ಚಿತ್ರವನ್ನು ಪಿ.ಎನ್.ಜಿ ಸ್ವರೂಪದಲ್ಲಿ ಸಲ್ಲಿಸಬೇಕಾಗುತ್ತದೆ.

3. ತಾರ್ಕಿಕತೆ: ಲೋಗೋದ ಪರಿಕಲ್ಪನೆ ವಿವರ 50 ಕ್ಕಿಂತ ಹೆಚ್ಚು ಪದಗಳಲ್ಲಿದ್ದು,ಕನ್ನಡ ಮತ್ತು ಇಂಗ್ಲೀಷ್ ಮತ್ತು ಟ್ಯಾಗ್‌ಲೈನ್ ಕೊಡತಕ್ಕದ್ದು.

4. ಲೋಗೋದ ವಿನ್ಯಾಸವು ಸಾಮಾಜಿಕ ಜಾಲತಾಣಗಳಾದ ಟ್ವಿಟರ್/ಫೇಸ್‌ಬುಕ್/ಇನ್ಸ್ಟಾಗ್ರಾಮ್ ಮತ್ತು ಪ್ರಿಂಟೆಡ್ ವಸ್ತುಗಳಾದ ಪತ್ರಿಕಾ ಪ್ರಕಟಣೆ ಮತ್ತು ಸೂಚನಾ ಫಲಕಗಳಿಗೆ ಹೊಂದುವಂತಿರಬೇಕು.

# 2. ನಮೂದುಗಳನ್ನು ತಯಾರಿಸಲು ಮಾರ್ಗದರ್ಶನಗಳು

### 2.1 ಇತರೆ ಷರತ್ತುಗಳು

1. ಒಂದು ಭಾರಿ ಸ್ವೀಕರಿಸಿದ ನಮೂದುಗಳನ್ನು ಹಿಂತಿರುಗಿಸಲಾಗುವುದಿಲ್ಲ.

2.ಅಂತಿಮವಾಗಿ ಆಯ್ಕೆಯಾದ ಲೋಗೋ ಮತ್ತು ಟ್ಯಾಗ್‌ಲೈನ್ ಮೈಸೂರು ಜಿಲ್ಲಾಡಳಿತದ ಬೌದ್ಧಿಕ ಆಸ್ತಿಯಾಗಿರುತ್ತದೆ ಮತ್ತು ಅದರ ಮೇಲೆ ಸ್ಪರ್ಧಿಯೂ ಕೂಡ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

3.ಅಂತಿಮ ಲೋಗೋ ವಿನ್ಯಾಸಕ್ಕೆ ಸಂಬಂಧಿಸಿದ ಮಾರ್ಗದರ್ಶಿಗಳು ಮತ್ತು ಇತರೆ ಷರತ್ತುಗಳು ಸ್ಪರ್ಧಿಯ ಜವಾಬ್ದಾರಿಯಾಗಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಮೂರನೇ ವ್ಯಕ್ತಿಯು ವಿವಾದ ಉಂಟುಮಾಡಿದ್ದಲ್ಲಿ ಮೈಸೂರು ಜಿಲ್ಲಾಡಳಿತ ಜವಾಬ್ದಾರಿಯಾಗುವುದಿಲ್ಲ.

a. 4. ಲೋಗೋ ವಿನ್ಯಾಸವು ಮೂಲವಾಗಿರಬೇಕು, India copy right ಕಾಯ್ದೆ 1957 ನ್ನು ಉಲ್ಲಂಘಿಸುವಂತಿಲ್ಲ. ಸ್ಪರ್ಧಿಯು ಅಂತಿಮವಾಗಿ ವಿನ್ಯಾಸಗೊಳಿಸಿದ ಲೋಗೋವನ್ನು ಇನ್ನಾವುದೇ ಸ್ಪರ್ಧೆಗಳಲ್ಲಿ ಬಳಸುವಂತಿಲ್ಲ.ಲೋಗೋ ವಿನ್ಯಾಸದಲ್ಲಿ ಸ್ಪರ್ಧಿಯ ವಿನ್ಯಾಸಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಹೋಲಿಕೆಗೆ ಸಂಬಂಧಿಸಿದ ದೂರುಗಳು ಬಂದಲ್ಲಿ ಸ್ಪರ್ಧಿಯು ತನ್ನ ಅಧಿಕೃತ ವಿನ್ಯಾಸದ ಬಗ್ಗೆ

ಜವಾಬ್ದಾರರಾಗಿರುತ್ತಾರೆ. ಆಯ್ಕೆಯಾದ ಲೋಗೋ ಮತ್ತು ಟ್ಯಾಗ್‌ಲೈನ್ ಅನ್ನು ಜಿಲ್ಲಾಡಳಿತ ,ಮೈಸೂರುರವರು ನಿಯಂತ್ರಕರು, ಪೇಟೆಂಟ್ಸ್,ವಿನ್ಯಾಸ ಹಾಗೂ ಟ್ರೇಡ್‌ಮಾರ್ಕ್, ಮುಂಬೈ ನಲ್ಲಿ ಜಿಲ್ಲಾಡಳಿತ ,ಮೈಸೂರುರವರ ಹೆಸರಿನಲ್ಲಿ ನೋಂದಾವಣೆ ಮಾಡಿಸಲಾಗುವುದು.

5.ವಿಜೇತ ಲೋಗೋ ವಿನ್ಯಾಸದ ಸಂಪೂರ್ಣ ಹಕ್ಕು ಮೈಸೂರು ಜಿಲ್ಲಾಡಳಿತಕ್ಕೆ ಇರುತ್ತದೆ. ಲೋಗೋವನ್ನು ಇಲಾಖೆಯು ತನ್ನ ಪ್ರಚಾರ ಕಾರ್ಯಗಳಿಗಾಗಿ,ಪ್ರಕಟಣೆಗಾಗಿ ಉಪಯೋಗಿಸುವ ಹಕ್ಕನ್ನು ಹೊಂದಿದೆ.

6. ಅಂತಿಮವಾಗಿ ವಿಜೇತವಾದ ಲೋಗೋ ವಿನ್ಯಾಸವನ್ನು ಮರು ಸಂಸ್ಕರಿಸುವ ಅಥವಾ ಸುಧಾರಣೆ ಮಾಡುವ ಹಕ್ಕನ್ನು ಮೈಸೂರು ಜಿಲ್ಲಾಡಳಿತ ಹೊಂದಿರುತ್ತದೆ.

7.ಸೂಚಿಸಿರುವ ಮಾರ್ಗದರ್ಶಿಗಳ ಅನ್ವಯ ಅಥವಾ ಷರತುಗಳ ಅನ್ವಯ ಲೋಗೋ ವಿನ್ಯಾಸ ಇಲ್ಲದಿದ್ದಲ್ಲಿ ಯಾವುದೇ ಸ್ಪರ್ಧಿಯನ್ನು ಆಯ್ಕೆ ಮಾಡದಿರುವ ಹಕ್ಕು ಜಿಲ್ಲಾಡಳಿತಕ್ಕೆ ಇರುತ್ತದೆ.

8.ಲೋಗೋ ವಿನ್ಯಾಸದ ನಮೂದುಗಳನ್ನು ಅನರ್ಹಗೊಳಿಸುವ ಹಕ್ಕನ್ನು ಜಿಲ್ಲಾಡಳಿತದ ವಿವೇಚನೆಗೆ ಒಳಪಟ್ಟಿರುತ್ತದೆ.

9.ಒಂದು ವೇಳೆ ಲೋಗೋ ಮತ್ತು ಟ್ಯಾಗ್‌ಲೈನ್ ಗಳಿಗಾಗಿ ಎರಡು ಪ್ರತ್ಯೇಕ ನಮೂದುಗಳು ಆಯ್ಕೆಯಾದಲ್ಲಿ ಬಹುಮಾನದ ಮೊತ್ತವನ್ನು ಸಮಿತಿಯ ತೀರ್ಮಾನದ ಅನುಸಾರ ವಿಭಜನೆ ಮಾಡಲಾಗುವುದು.ಅಂತಿಮ ತೀರ್ಮಾನ ಸಮಿತಿಯದ್ದಾಗಿರುತ್ತದೆ.

## 2.2 ಆಯ್ಕೆ ಪ್ರಕ್ರಿಯೆ

1. 1.3 ಮತ್ತು 1.4 ರಲ್ಲಿ ತಿಳಿಸಿರುವಂತೆ ಸ್ಪರ್ಧಿಗಳನ್ನು ಅವರು ಮಾಡಿರುವ ಲೊಗೋ ವಿನ್ಯಾಸದ ಮೇಲೆ ವಿಜೇತರನ್ನು ಆಯ್ಕೆಮಾಡಲಾಗುತ್ತದೆ.

2. ಆಯ್ಕೆ ಸಮಿತಿಯನ್ನು ಪ್ರವಾಸೋದ್ಯಮ ಇಲಾಖೆಯು ರಚಿಸಲ್ಪಟ್ಟಿರುತ್ತದೆ.ವಿಜೇತರಿಗೆ ಬಹುಮಾನದ ಮೊತ್ತವಾಗಿ ರೂ.50 ಸಾವಿರಗಳು ಆಗಿರುತ್ತದೆ. ವಿಜೇತರ ಹೆಸರನ್ನು www.mysore.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

3. ವಿಜೇತರ ನಮೂದನ್ನು ( ವಿಜೇತರ ವಿವರ ಮತ್ತು ಭಾವಚಿತ್ರ) www.mysore.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

4. ಯಾವದೇ ರೀತಿಯ ಕೃತಿಚೌರ್ಯಕ್ಕೆ ಅವಕಾಶವಿರುವುದಿಲ್ಲ

5. ಮಾರ್ಗಸೂಚಿಗಳು ಮತ್ತು ಷರತ್ತುಗಳ ಅನುಸರಿಸುವಿಕೆಗೆ ಸ್ಪರ್ಧಾಂಕಾಕ್ಷಿಗಳು ಜವಾಬ್ದಾರರಾಗಿರುತ್ತಾರೆ.ಮೂರನೇ ವ್ಯಕ್ತಿಯ ವಿವಾದಕ್ಕೆ ಜಿಲ್ಲಾಡಳಿತ ಜವಾಬ್ದಾರಿಯಾಗಿರುವುದಿಲ್ಲ.

6. ನಮೂದು ಸರಿಯಾಗಿಲ್ಲದಿದ್ದ ಪಕ್ಷದಲ್ಲಿ ಯಾವುದೇ ಕಾರಣವನ್ನು ಅಭ್ಯರ್ಥಿಗೆ ನೀಡದೇ ತಿರಸ್ಕೃತಗೊಳಿಸಲಾಗುತ್ತದೆ.

7. ಪಾಲ್ಗೊಳ್ಳುವವರು ತಮ್ಮ ಲೋಗೋ ವಿನ್ಯಾಸವನ್ನು ಮುದ್ರಿಸುವಂತಿಲ್ಲ.

8. ವಿಜೇತ ಲೋಗೋವನ್ನು ಉಪಯೋಗಿಸುವ ಅಥವಾ ಮರು ಮುದ್ರಿಸುವ ಹಕ್ಕು ಜಿಲ್ಲಾಡಳಿತಕ್ಕೆ ಇರುತ್ತದೆ.

9. ವಿಜೇತ ಸ್ಪರ್ಧಿಯು ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾಡಳಿತ,ಮೈಸೂರು ಜಿಲ್ಲೆಗೆ ಒದಗಿಸಬೇಕಾಗುತ್ತದೆ.

10. ಮೈಸೂರು ಜಿಲ್ಲಾಡಳಿತದಲ್ಲಿ ಕೆಲಸ ಮಾಡುವ ಯಾವುದೇ ಉದ್ಯೋಗಿ ಮತ್ತು ಅವರ ಕುಟುಂಬದವರು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತಿಲ್ಲ.

11. ಯಾವುದೇ ಸ್ಪರ್ಧಿಯು ಒಂದಕ್ಕಿಂತ ಹೆಚ್ಚು ಲೊಗೋ ವಿನ್ಯಾಸಗಳನ್ನು ಸಲ್ಲಿಸಿದ್ದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ರದ್ದುಗೊಳಿಸಲಾಗುವುದು.

12. ಸ್ಪರ್ಧಿಯು ತನ್ನ ಎಲ್ಲಾ ವಿವರಗಳನ್ನು ಮತ್ತು ದಾಖಲೆಗಳನ್ನು ಜಿಲ್ಲಾಡಳಿತಕ್ಕೆ ಹೆಚ್ಚಿನ ಸಂವಹನಕ್ಕಾಗಿ ಸಲ್ಲಿಸಬೇಕಾಗುತ್ತದೆ. ಸ್ಫರ್ಧಿಯ ಹೆಸರು,ಭಾವಚಿತ್ರ,ದೂರವಾಣಿ ಸಂಖ್ಯೆ ಹಾಗೂ ಲೋಗೋ ವಿನ್ಯಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.ಸ್ಪರ್ಧಿಯ ಹೆಸರು,ಆಯ್ಕೆ ಪ್ರಕ್ರಿಯೆ,ಅರ್ಹ/ಅನರ್ಹ ಸ್ಫರ್ಧಿಯ ಹೆಸರು ಇತರೆ ಎಲ್ಲಾ ವಿವರಗಳನ್ನು www.mysore.nic.in ವೆಬ್‌ಸೈಟ್‌ಲ್ಲಿ ಪ್ರಕಟಿಸುವ ಹಕ್ಕು ಜಿಲ್ಲಾಡಳಿತಕ್ಕಿರುತ್ತದೆ.

## 2.3 ಬೌದ್ಧಿಕ ಆಸ್ತಿಯ ಹಕ್ಕು

1. ಲೋಗೋ ವಿನ್ಯಾಸಕ್ಕೆ ಸಂಬಂಧಿಸಿದ ಎಲ್ಲಾ ನಮೂದುಗಳು ಮೈಸೂರು ಜಿಲ್ಲಾಡಳಿತ ಆಸ್ತಿಯಾಗಿರುತ್ತವೆ ಮತ್ತು ಈ ನಮೂದುಗಳನ್ನು ಹಿಂತಿರಿಗಿಸಲಾಗುವುದಿಲ್ಲ.

2. ಸ್ಪರ್ದೆಯಲ್ಲಿ ವಿಜೇತರಾದವರು ತಮ್ಮ ಲೋಗೋ ವಿನ್ಯಾಸದ ಮೂಲ ನಮೂದನ್ನು ಮೈಸೂರು ಜಿಲ್ಲಾಡಳಿತಕ್ಕೆ ಸಲ್ಲಿಸಬೇಕಾಗುತ್ತದೆ.ಒಂದು ವೇಳೆ ಕೈಬರಹದ ಸ್ಕೆಚ್ ಇದ್ದಲ್ಲಿ ಅದನ್ನೂ ಕೂಡ ಜಿಲ್ಲಾಡಳಿತಕ್ಕೆ ಸಲ್ಲಿಸಬೇಕಾಗುತ್ತದೆ.

3. ವಿಜೇತ ಸ್ಪರ್ಧಿಯ ಲೋಗೋ ವಿನ್ಯಾಸದ ಕೃತಿಸ್ವಾಮ್ಯ ಮೈಸೂರು ಜಿಲ್ಲಾಡಳಿತದ ಸ್ವಂತ ಆಸ್ತಿ ಎಂದು ಪರಿಗಣಿಸಲಾಗುವುದು.ಯಾವುದೇ ಸ್ಪರ್ಧಿ ವಿಜೇತರಾಗಿದ್ದಲ್ಲಿ ಅವರ ಲೋಗೋ ವಿನ್ಯಾಸದ ಕೃತಿಸ್ವಾಮ್ಯ ಮೈಸೂರು ಜಿಲ್ಲಾಡಳಿತಕ್ಕಿರುತ್ತದೆ ಮತ್ತು ಅದನ್ನು ಮರುವಿನ್ಯಾಸ ಮಾಡುವ ಹಕ್ಕು ಜಿಲ್ಲಾಡಳಿತಕ್ಕಿರುತ್ತದೆ.

4. ಸ್ಪರ್ಧಿಯು ವಿನ್ಯಾಸ ಮಾಡಿದ ಲೋಗೋ/ಅವರ ಮೂಲ ಕೆಲಸ/ಅವರ ಬೌದ್ಧಿಕ ಆಸ್ತಿಯಾಗಿರುತ್ತದೆ.ಮೂರನೇ ವ್ಯಕ್ತಿ ಇದನ್ನು ನಕಲು ಮಾಡಿದ್ದಲ್ಲಿ ಆ ವ್ಯಕ್ತಿಯು ಸ್ಪರ್ದೆಯಿಂದ ಅನರ್ಹಗೊಳ್ಳುತ್ತಾರೆ.ಇಂತಹ ಯಾವುದೇ ನಕಲು ವಿನ್ಯಾಸಗಳ ಅನರ್ಹತೆಗೆ ಸ್ಪರ್ಧಿಗಳೇ ಜವಾಬ್ದಾರರು,ಕೃತಿಸ್ವಾಮ್ಯ ಉಲ್ಲಂಘನೆಗೆ ಮೈಸೂರು ಜಿಲ್ಲಾಡಳಿತದ ಜವಾಬ್ದಾರಿಯಾಗಿರುವುದಿಲ್ಲ.

## 2.4 ಮೌಲ್ಯಮಾಪನ ಪ್ರಕ್ರಿಯೆ

1. ಜಿಲ್ಲಾಡಳಿತವು ರಚಿಸಿದ ಆಯ್ಕೆ ಸಮಿತಿಯು ಸ್ಪರ್ಧಿಗಳ ನಮೂದುಗಳನ್ನು ಸ್ವೀಕರಿಸಿ,ಪರಿಶೀಲಿಸಿ ಮೌಲ್ಯಮಾಪನ ಮಾಡಿ ಬಹುಮಾನ ನೀಡಲಾಗುತ್ತದೆ.

2. ಸ್ಪರ್ಧಿಯ ಸೃಜನಶೀಲತೆ,ಮೂಲ ತಾಂತ್ರಿಕ ಪರಿಣಿತಿ,ಸರಳತೆ,ಕಲೆ,ದೃಶ್ಯ ಪರಿಣಾಮ ಮತ್ತು ಸ್ಪರ್ಧಿಯು ಹೇಗೆ ಮೈಸೂರನ್ನು ಒಂದು ಬ್ರ್ಯಾಂಡ್ ಆಗಿ ತೋರಿಸುತ್ತಾರೆ ಎಂಬ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿಜೇತರ ಆಯ್ಕೆಯನ್ನು ನಿರ್ಧರಿಸಲಾಗುತ್ತದೆ.

3. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಪರ್ಧಿಗಳಿಗೆ ಯಾವುದೇ ಸ್ಪಷ್ಟೀಕರಣ ನೀಡಲಾಗುವುದಿಲ್ಲ.

4. ಸ್ಪರ್ದೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕಾನೂನು ನಡವಳಿಗಳು/ಅಡೆತಡೆಗಳು ಉಂಟಾದಲ್ಲಿ/ವಿನ್ಯಾಸಕ್ಕೆ ಸಂಬಂಧಿಸಿದಂತೆ ಅಡೆತಡೆಗಳುಂಟಾದಲ್ಲಿ ಮೈಸೂರು ಸ್ಥಳೀಯ ನ್ಯಾಯಾಲಯಕ್ಕೆ ಸ್ಪರ್ಧಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**ಅರ್ಜಿ ನಮೂನೆ 1**

1. ಹೆಸರು/ಸಂಘಟನೆ ಅಥವಾ ಸಂಸ್ಥೆಯ ಹೆಸರು/ಗುಂಪಿನ ಮುಖ್ಯಸ್ಥರ ಹೆಸರು:
2. ಮನೆ ವಿಳಾಸ/ಕಛೇರಿ ವಿಳಾಸ:
3. ದೂರವಾಣಿ/ಮೊಬೈಲ್ ಸಂಖ್ಯೆ:
4. ಇ–ಮೇಲ್ ವಿಳಾಸ:
5. ಆಧಾರ್/ಪಾನ್/ಚುನಾವಣಾ ಗುರುತಿನ ಚೀಟಿ/ಟ್ಯಾನ್ ಸಂಖ್ಯೆ:

ಇತ್ತೀಚಿನ ಭಾವಚಿತ್ರ

ದೃಢೀಕರಣ: ನಾನು/ಸಂಸ್ಥೆ/ಗುಂಪಿನ ಮುಖ್ಯಸ್ಥ ವಿನ್ಯಾಸ ಮಾಡಿದ ಲೋಗೋ ಮತ್ತು ನಮೂದುಗಳು ವಿಜೇತರಾಗಿದ್ದಲ್ಲಿ ಕೃತಿಸ್ವಾಮ್ಯದ ಹಕ್ಕು ಸಂಪೂರ್ಣವಾಗಿ ಮೈಸೂರು ಜಿಲ್ಲಾಡಳಿತದ ಆಸ್ತಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಒಂದು ಪಕ್ಷ ಲೋಗೋ ವಿನ್ಯಾಸ ಅಂತಿಮವಾಗಿ ಆಯ್ಕೆಯಾಗಿದ್ದಲ್ಲಿ ಮೈಸೂರು ಜಿಲ್ಲಾಡಳಿತ ಘೋಷಿಸಿದ ಬಹುಮಾನದ ಮೊತ್ತವನ್ನು ಮಾತ್ರ ತೆಗೆದುಕೊಳ್ಳುತ್ತೇನೆ ಹಾಗೂ ಯಾವುದೇ ರೀತಿಯ ಹೆಚ್ಚಿನ ಬಹುಮಾನವನ್ನು ಅಪೇಕ್ಷಿಸುವುದಿಲ್ಲ,ವಿನ್ಯಾಸಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ/ಕೃತಿಸ್ವಾಮ್ಯದ ಹಕ್ಕು/ಮರುವಿನ್ಯಾಸದ ಹಕ್ಕು/ಪ್ರಕಟಣೆಯ ಹಕ್ಕು ಮೈಸೂರು ಜಿಲ್ಲಾಡಳಿತದ ಹಕ್ಕಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ಸಹಿ:

ಸ್ಥಳ:
ದಿನಾಂಕ: